ಅಧಿಕ ಜೇಷ್ಠ ಮಾಸ

ಈ ಬಾರಿ ಮೇ 11ರ ತನಕ ತುಂಬಾ ಮಂಗಲ ಕಾರ್ಯಗಳು ಜರಗುತ್ತಿದ್ದು, ಆನಂತರ ಜೂನ್ 16 ರ ತನಕ ಶುಭ ಮುಹೂರ್ತಗಳು ಇಲ್ಲವಂತೆ. ಯಾಕೆ ಹಾಗೆ? ಯಾಕೆಂದರೆ ಮೇ 17 ರಿಂದ ಅಧಿಕ ಜೇಷ್ಠ ಮಾಸ, ಜೂನ್ 15 ರ ತನಕ. ಅಧಿಕ ಮಾಸದಲ್ಲಿ ಮದುವೆ ಮುಂಜಿಯಂತಹ ಮಂಗಲ ಕಾರ್ಯಗಳು ನಡೆಯುವುದಿಲ್ಲ.

ಏನಿದು ಅಧಿಕ ಮಾಸ? ಯಾವ (ಚಾಂದ್ರ) ತಿಂಗಳಲ್ಲಿ ಸಂಕ್ರಾಂತಿ ಇರುವುದಿಲ್ಲವೋ ಆ ತಿಂಗಳನ್ನು ಅಧಿಕ ಮಾಸವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಚಾಂದ್ರಮಾಸದ ಅವಧಿ (ಸರಾಸರಿ 29.53 ದಿನಗಳು) ಸೌರಮಾಸದ ಅವಧಿ (30.44) ಗಿಂತ ಕಡಿಮೆ. ಆದುದರಿಂದ ಒಂದೊಂದು ಸಲ ಒಂದೇ ಸೌರಮಾಸದಲ್ಲಿ ಎರಡು ಅಮಾವಾಸ್ಯೆಗಳು ಘಟಿಸಬಹುದು. ಆಗ ಮೊದಲನೆಯ ಚಾಂದ್ರಮಾಸ ಅಧಿಕವಾಗುತ್ತದೆ, ಎರಡನೆಯದು ಅದೇ ಹೆಸರಿನ ನಿಜಮಾಸವಾಗುತ್ತದೆ. ಉದಾಹರಣೆಗೆ ಈ ಬಾರಿ ವೃಷಭ ಮಾಸದ ಮೊದಲಲ್ಲೊಂದು, ಕಡೆಯಲ್ಲೊಂದು ಅಮಾವಾಸ್ಯೆ ಬಂದಿದೆ, ಮೊದಲಿನ ಅಮಾವಾಸ್ಯಾ ನಂತರದ ತಿಂಗಳು ಅಧಿಕ ಜ್ಯೇಷ್ಠ, ಎರಡನೆಯ ಅಮಾವಾಸ್ಯಾ ನಂತರದ್ದು ನಿಜ ಜ್ಯೇಷ್ಠ ಆಗಿರುತ್ತದೆ. ವೃಷಭ ಸಂಕ್ರಮಣ 15/05/26 ರಂದು ತಥಾ ಮಿಥುನ ಸಂಕ್ರಮಣ 15/06/26 ರಂದು 12:58 ಗಂಟೆಗೆ. ವೈಶಾಖ ಅಮಾವಾಸ್ಯೆ 17/05/26, 01:31ರ ತನಕ. 17/05/26 ರಿಂದ 15/06/26ರ ತನಕ ಅಧಿಕ ಜೇಷ್ಠ ಮಾಸ. ಅಧಿಕ ಜೇಷ್ಠ ಅಮಾವಾಸ್ಯೆ15/06/26ರಂದು, 08:24 ರ ತನಕ. 16/06/26 ರಿಂದ 14/07/26 ರ ತನಕ ನಿಜ ಜೇಷ್ಠ ಮಾಸ. ಇಲ್ಲಿ ಎರಡನೇ ಅಮಾವಾಸ್ಯೆ ಸಂಕ್ರಾಂತಿಗಿಂತ ಕೇವಲ 4 ಗಂಟೆ 34 ನಿಮಿಷ ಮೊದಲು ಕೊನೆಗೊಳ್ಳುತ್ತದೆ.

ಈ ಹಿಂದೆ 18/07/2023 ರಿಂದ 16/08/2023 ರ ವರೆಗೆ ಅಧಿಕ ಶ್ರಾವಣ ಮಾಸವವಾಗಿತ್ತು. ಅದಕ್ಕೂ ಮೊದಲು ಅಶ್ವಯುಜ ಮಾಸ (18/09/2020 ರಿಂದ ಪ್ರಾರಂಭವಾಗಿ 16/10/ 2020 ರ ತನಕ) ಅಧಿಕವಾಗಿತ್ತು. ಮಹತ್ವದ ಸಂಗತಿಯೆಂದರೆ ಈ ಅಧಿಕ ಮಾಸವು ಮಾರ್ಗಶಿರ, ಪುಷ್ಯ, ಮಾಘ ಮಾಸಗಳಲ್ಲಿ ಬರುವುದಿಲ್ಲ, ಯಾಕೆಂದರೆ ಈ ಚಾಂದ್ರಮಾನ ತಿಂಳುಗಳು ಬರುವ ಸೌರ ವೃಶ್ಚಿಕ, ಧನು, ಮಕರ ತಿಂಗಳುಗಳಲ್ಲಿ 29 ದಿನಗಳು. ಈ ಬಾರಿ ಮಕರ ತಿಂಗಳಲ್ಲಿ 28 ದಿನಗಳು. ಈ ಬಾರಿ ಚಾಂದ್ರಮಾನ ಪುಷ್ಯ ಮಾಸದ ಅವಧಿ 29 ದಿನ 18 ಗಂ. 09 ನಿ (ಗರಿಷ್ಠ), ನಿಜ ಜೇಷ್ಠ ಮಾಸದ ಅವಧಿ 29 ದಿನ 06 ಗಂ. 49 ನಿ (ಕನಿಷ್ಠ). 250 ವರ್ಷಗಳಿಗೊಮ್ಮೆ ಕಾರ್ತೀಕ ಮಾಸದಲ್ಲಿ ಅಧಿಕಮಾಸ ಬರುತ್ತದೆ. 1963 ರಲ್ಲಿ ಕಾರ್ತೀಕಮಾಸದಲ್ಲಿ ಅಧಿಕ ಮಾಸವಿತ್ತು.

ಕ್ಷಯಮಾಸ: ಸೌರ ಧನುರ್ಮಕರಗಳ ಮಾಸಗಳ ಅವಧಿ ಸರಾಸರಿಗಿಂತ ಕಡಿಮೆಯೆಂದು ಮೇಲೆ ತಿಳಿಸಿದೆ. ಈ ಮಾಸಗಳಲ್ಲಿ ನಡೆಯುವ ಚಾಂದ್ರಮಾಸಗಳ ಅವಧಿ ಒಂದೊಂದು ಸಲ ಸೌರಮಾಸದ ಅವಧಿಗಳಿಗಿಂತ

ಹೆಚ್ಚಾಗಬಹುದು. ಇದರ ಜೊತೆಗೆ ಇಂಥ ಸಂಕ್ರಮಣವೊಂದಕ್ಕೆ ಕೆಲವೇ ಘಳಿಗೆಗಳಿಗೆ ಮುಂಚೆ ಅಮಾವಾಸ್ಯೆ ಸಂಭವಿಸಿದರೆ, ಮುಂದಿನ ಅಮಾವಾಸ್ಯೆ ಮುಂದಿನ ಸಂಕ್ರಮಣಾ ನಂತರ ಸಂಭವಿಸಬಹುದು. ಆಗ ಒಂದು ಸೌರಮಾಸದಲ್ಲೆಲ್ಲ ಯಾವ ಅಮಾವಾಸ್ಯೆಯೂ ಘಟಿಸುವುದಿಲ್ಲ. ಆ ಮಾಸ ಕ್ಷಯಮಾಸವಾಗುತ್ತದೆ. ಹೀಗೆ ಕ್ಷಯಮಾಸವಾದಾಗಲೆಲ್ಲ ಅದರ ಹಿಂದಿನ 5 ತಿಂಗಳಿಗೊಂದು ಅಧಿಕಮಾಸ, ಮುಂದಿನ 5 ತಿಂಗಳೊಳಗೊಂದು ಅಧಿಕ ಮಾಸ ಬಂದೇ ಬರುತ್ತದೆ. ಇದರ ಅರ್ಥ ಒಂದು ಚಾಂದ್ರ- ಸೌರವರ್ಷದಲ್ಲಿ 12 ಅಥವಾ 13 ಚಾಂದ್ರಮಾಸಗಳಿರಬಹುದೇ ಹೊರತು 11 ಎಂದೂ ಇರುವುದಿಲ್ಲ. ಕೊನೆಯ ಬಾರಿ, 1983ರ ಜನವರಿ 15 ರಿಂದ ಫೆಬ್ರವರಿ 12 ರವರೆಗೆ ಪೌಷ ಮಾಸವು ಕ್ಷಯಮಾಸವಾಗಿತ್ತು.

ಅಧಿಕ, ಕ್ಷಯ ಮಾಸಗಳ ಉದ್ದೇಶ ಸೌರ ಹಾಗೂ ಚಾಂದ್ರಮಾನ ಪಂಚಾಂಗಳನ್ನು ಸರಿದೂಗಿಸುವುದು.

ಚಾಂದ್ರ ಮತ್ತು ಸೌರ ವರ್ಷಗಳ ಮಧ್ಯೆ 10 ದಿನ, 2 ಗಂಟೆ, 59 ನಿಮಿಷ, 48 ಸೆಕಂಡುಗಳ ವ್ಯತ್ಯಾಸ ಇದೆ. ಋತುಗಳು ಭೂಮಿಯ ವಾರ್ಷಿಕ ಚಲನೆಯನ್ನು (ಸೌರ ಪಂಚಾಂಗ) ಹೊಂದಿ ಕೊಂಡಿರುತ್ತದೆ. ಆದರೆ ಋತುಗಳನ್ನು ಎರಡೆರಡು ಚಾಂದ್ರ ಮಾಸಗಳಲ್ಲಿ ವಿಭಾಗಿಸಿ ಹಾಕಿದ್ದಾರೆ. ವಸಂತ ಋತು: ಚೈತ್ರ ಮತ್ತು ವೈಶಾಖ ಮಾಸಗಳು, ವರ್ಷ ಋತು: ಶ್ರಾವಣ ಮತ್ತು ಭಾದ್ರಪದ ಮಾಸಗಳು ಹೀಗೆ. ಚಾಂದ್ರ ಪಂಚಾಂಗ ಹೊಂದಿಸದೇ ಇದ್ದರೆ, ವಸಂತ ಋತು ಮಳೆಗಾಲದಲ್ಲಿ (ಶ್ರಾವಣ, ಭಾದ್ರಪದ), ವರ್ಷಾ ಋತು ಬಿರು ಬೇಸಿಲಿನ ಜ್ಯೇಷ್ಠ ಆಷಾಢ ಮಾಸ (ಗ್ರೀಷ್ಮ ಋತು) ಗಳಲ್ಲಿ ಬರ ಬಹುದು.

ಈ ವರ್ಷ ವಸಂತ ಋತು ಆರಂಭದ ಚಾಂದ್ರ ಯುಗಾದಿ ಮಾರ್ಚ್ 19 ರಂದು ಬಂದಿತ್ತು. ಆದರೆ ಸೌರ ಯುಗಾದಿ ಎಪ್ರಿಲ್ 14 ರಂದು (ನಾಲ್ಕು ವರ್ಷಕ್ಕೋಮ್ಮೆ ಎಪ್ರಿಲ್ 15 ಕ್ಕೆ) ಬರುತ್ತದೆ. ನಿಜ ಸಂಕ್ರಾಂತಿಗಳು ಸೌರ ಪಂಚಾಂಗದಲ್ಲಿ ನಮೂದಿಸಿರುವ ತೇದಿಗಳಿಗಿಂತ 23 ದಿನಗಳಷ್ಟು ಮುಂದಿವೆ. ಹಾಗಾಗಿ ನಿಜ ವಸಂತ ಋತು ಮಾರ್ಚ್ 20/21 ಕ್ಕೆ ಆರಂಭವಾದರೆ, ಸೌರ ಪಂಚಾಂಗದಲ್ಲಿ ಎಪ್ರಿಲ್ 14/15 ರಂದೇ ಇದೆ. ಋತುಗಳು ಪ್ರಸಕ್ತ ಗ್ರೆಗೋರಿಯನ್ ಕ್ಯಾಲೆಂಡರ್‌ಗೆ ಸರಿಯಾಗಿ ಹೊಂದಿಕೆ ಆಗುತ್ತವೆ.

ಕೊನೆಗೊಂದು ಮಾತು, ಈ ಅಧಿಕಮಾಸ, ಎರಡು ಪಂಚಾಂಗಳ ಹೊಂದಾಣಿಕೆಗಾಗಿ ಇರುವ ಏರ್ಪಾಡು. ಹಾಗಾಗಿ ಈ ಅಧಿಕಮಾಸ ಏಕೆ ಅಮಂಗಳ? ಯಾಕೆ ಯಾವುದೇ ಶುಭಕಾರ್ಯಗಳು ಆಧಿಕ ಮಾಸದಲ್ಲಿ ನಡೆಯಬಾರದು?